ಇ) ಹೌದು. ನಿಗಮವು ಈಗಾಗಲೇ 1996ನೇ ಇಸವಿಯಲ್ಲಿ ಮೊದಲಬಾರಿಗೆ ಸಾರ್ವಜನಿಕರಿಂದ ಸಂಪನ್ಮೂಲ ಸಂಗ್ರಹಿಸಿದೆ ಹಾಗೂ 2002-03ನೇ ಸಾಲಿನಲ್ಲಿ ಬೇಕಾಗುವ ಸಂಪನ್ಮೂಲವನ್ನು ಕ್ರೋಢೀಕರಿಸಲು ಬರುವ 27-3-2002 ರಿಂದ ದಿ: 22-4-02ರವರೆಗೆ ರೂ. 350.00 ಕೋಟಿಗಳನ್ನು ಮಾರುಕಟ್ಟೆಯಿಂದ ಸಂಗ್ರಹಿಸಲಾಗುವುದು.

ಈ) ಈ ಮೊತ್ತವನ್ನು ಕೃಷ್ಣ ಮೇಲ್ದಂಡೆ ಯೋಜನೆ ಅಡಿಯಲ್ಲಿ ಬರುವ ಬಾಕಿ ಉಳಿದಿರುವ ಬಂಡಮಾಳ ನೀರಾವರಿ ಕಾಮಗಾರಿಗಳಿಗೆ ಹಾಗೂ ಈಗ ಉದ್ದೇಶಿಸಿರುವ ಸಾರ್ವಜನಿಕ ಬಾಂಡುಗಳ ವಿತರಣೆಹಾಗೂ ಲಿಸ್ಟಿಂಗ್ ವೆಚ್ಚಗಳಿಗೆ ಬಳಸಲಾಗುವುದು.

ಉ) ಈಗ ಉದ್ದೇಶಿಸಿರುವ ಬಾಂಡುಗಳ ಮುಖ ಬೆಲೆಯು 1ಕ್ಕೆ ರೂ. 5,000-00 ಆಗಿರುತ್ತದೆ. ಸದರಿ ಸಾರ್ವಜನಿಕ ಬಾಂಡುಗಳನ್ನು ಮಾರುಕಟ್ಟೆಯಿಂದ 27-3-2002 ರಿಂದ 22-4-2002ರವರೆಗೆ ಸಂಗ್ರಹಿಸಲಾಗುವುದು. ಬಾಂಡುಗಳ ಅವಧಿಯು 7 ವರ್ಷಗಳಾಗಿರುತ್ತದೆ ಹಾಗೂ ಕಂಪನಿಗೆ ಮತ್ತು ಹೂಡಿಕೆದಾರರಿಗೆ ಐದು ವರ್ಷಗಳ ಮುಕ್ತಾಯದ ನಂತರ ಹಿಂದಿರುಗಿಸುವ : ಹಿಂದಕ್ಕೆ ಪಡೆಯುವ ಅವಕಾಶವಿರುತ್ತದೆ.

ಹಾಸನ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿ

1445 (1654) - ಶ್ರೀ ಪುಟ್ಟರಂಗನಾಥ. ಎಸ್.ಹೆಚ್. (ಬೇಲೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿಗೆ ಎಷ್ಟು ಹಣ ಖರ್ಚಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಬೇಲೂರು ತಾಲ್ಲೂಕಿನಲ್ಲಿ ಜಲಾನಯನ ಅಭಿವೃದ್ಧಿಗೆ ಈ ಸಾಲಿನಲ್ಲಿ ಎಷ್ಟು ಹಣ ನಿಗದಿಪಡಿಸಲಾಗಿದೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಹಾಸನ ಜಿಲ್ಲೆಯಲ್ಲಿ ಜಲಾನಯನ ಅಭಿವೃದ್ಧಿಗಾಗಿ 2001-2002ನೇ ಸಾಲಿನಲ್ಲಿ ಫೆಬ್ರವರಿ ಅಂತ್ಯದವರೆಗೆ ರೂ.302.30 ಲಕ್ಷ ರೂಪಾಯಿಗಳು ವೆಚ್ಚವಾಗಿರುತ್ತದೆ.

ತಾಲ್ಲೂಕುವಾರು ವಿವರ (ಲಕ್ಷ. ರೂಪಾಯಿಗಳಲ್ಲಿ)

1.	ಹಾಸನ	..	ರೂ. 53.64
2.	ಅರಸೀಕೆರೆ	...	ರೂ. 44.71
3.	ಹೊಳೆನರಸೀಪುರ	...	ರೂ. 23.08
4.	ಚೆನ್ನರಾಯಪಟ್ಟಣ	..	ರೂ. 62.58
5.	ಅರಕಲಗೂಡು	...	ರೂ. 23.99
6.	ಸಕಲೇಶಪುರ	...	ರೂ. 22.99

7. ಬೇಲೂರು	...	ರೂ. 49.16
8. ಅಲೂರು	...	ರೂ. 22.11
ಒಟ್ಟು		ರೂ. 302.8

ಅ) ಬೇಲೂರು ತಾಲ್ಲೂಕಿಗೆ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಈ ಸಾಲಿನಲ್ಲಿ (2001-02) ರೂ. 126.32 ಲಕ್ಷ ರೂ.ಗಳನ್ನು ನಿಗದಿಪಡಿಸಲಾಗಿರುತ್ತದೆ.

ಬೇಲೂರು ತಾಲ್ಲೂಕಿನ ಮಾದೀಹಳ್ಳಿ ಮತ್ತು ಹಳೇಬೀಡು ಹೋಬಳಿಗಳಿಗೆ ಯಗಚಿ ಜಲಾಶಯದಿಂದ ನೀರು ಸರಬರಾಜು

1446 (1656) - ಶ್ರೀ ಪುಟ್ಟರಂಗನಾಥ್. ಎಸ್.ಹೆಚ್. (ಬೇಲೂರು) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಗಚಿ ನೀರಾವರಿ ಯೋಜನೆಗಾಗಿ ಕಾಯ್ದಿರಿಸಲಾದ ಒಟ್ಟು ಹಣ ಎಷ್ಟು? ಆ ಪೈಕಿ ಖರ್ಚಾಗಿರುವ ಹಣ ಎಷ್ಟು? ಉಳಿದ ಹಣ ಎಷ್ಟು?

ಆ) ಈ ಯೋಜನೆ ಮುಗಿಸಲು ಇನ್ನು ಎಷ್ಟು ಹಣದ ಅವಶ್ಯಕತೆಯಿರುತ್ತದೆ?

ಇ) ಬೇಲೂರು ತಾಲ್ಲೂಕಿನ ಮಾದೀಹಳ್ಳಿ ಮತ್ತು ಹಳೇಬೀಡು ಹೋಬಳಿಗಳಿಗೆ ಯಗಚಿ ಜಲಾಶಯದಿಂದ ನೀರು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ಅ) 2001-02ನೇ ಸಾಲಿಗೆ ಯಗಚಿ ನೀರಾವರಿ ಯೋಜನೆಗಾಗಿ

ಒಟ್ಟು ಅನುದಾನ	ರೂ. 1410.00 ಲಕ್ಷಗಳು
ಇದುವರೆವಿಗೆ ವೆಚ್ಚವಾಗಿರುವ ಮೊತ್ತ	ರೂ. 1212.00 ಲಕ್ಷಗಳು
ಅನುದಾನದಲ್ಲಿ ಉಳಿದ ಹಣ	ರೂ. 198.00 ಲಕ್ಷಗಳು

ಆ) ಇದುವರೆವಿಗೆ ಈ ಯೋಜನೆಗೆ ರೂ. 14176.00 ಲಕ್ಷಗಳು ಖರ್ಚು ಮಾಡಲಾಗಿದೆ. ಸದರಿ ಯೋಜನೆ ಮುಗಿಸಲು ರೂ. 16,176.00 ಲಕ್ಷಗಳ ಹಣದ ಅವಶ್ಯಕತೆ ಇರುತ್ತದೆ.

ಇ) ಬೇಲೂರು ತಾಲ್ಲೂಕಿನ ಮಾದೀಹಳ್ಳಿ ಮತ್ತು ಹಳೇಬೀಡು ಹೋಬಳಿಗಳಿಗೆ ಯಗಚಿ ಜಲಾಶಯದಿಂದ ಏತ ನೀರಾವರಿ ಮೂಲಕ ನೀರು ಒದಗಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಬೇಲೂರು ತಾಲ್ಲೂಕಿನಲ್ಲಿರುವ ವಿಷ್ಣು ಸಮುದ್ರ ಕೆರೆಯ ಹೂಳು ತೆಗೆಯುವುದು

1447 (1657) - ಶ್ರೀ ಪುಟ್ಟರಂಗನಾಥ್. ಎಸ್.ಹೆಚ್. (ಬೇಲೂರು): ಮಾನ್ಯ ಜಲ ಸಂಪನ್ಮೂಲ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ವಿಷ್ಣು ಸಮುದ್ರ ಕೆರೆಗಳ ಹೂಳು ತೆಗೆಯಲು ಕ್ರಮ ಕೈಗೊಳ್ಳಲಾಗಿದೆಯೇ?